**ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರ ನೇಮಕಾತಿ ಸಮಿತಿ,**
**ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿ, ಕಾವೇರಿ ಭವನ, 6ನೇ ಮಹಡಿ, ಕೆ.ಜಿ. ರಸ್ತೆ,**
**ಬೆಂಗಳೂರು – 560 009**

**ಅಧಿಸೂಚನೆ**

**ಸಂಖ್ಯೆ:ಡಿಪಿಎನ್:ನೇಸ:09:2019–20**
**ಬೆಂಗಳೂರು, ದಿನಾಂಕ: 26ನೇ ಅಕ್ಟೋಬರ್ 2021.**

**(ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರ ನೇಮಕಾತಿ ಸಮಿತಿಯು ದಿನಾಂಕ: 08.10.2021ರಂದು ಪ್ರಕಟಿಸಿರುವ ಅಧಿಸೂಚನೆ ಸಂಖ್ಯೆ:ಡಿಪಿಎನ್:ನೇಸ:09:2019–20ಕ್ಕೆ ಸ್ಪಷ್ಟೀಕರಣ)**

ಮುಖ್ಯ ಪರೀಕ್ಷೆಗೆ ಅರ್ಹರಾಗಿರುವ ಅಭ್ಯರ್ಥಿಗಳ ಮಾಹಿತಿಯನ್ನು ಅಧಿಸೂಚನೆ ಸಂಖ್ಯೆ: ಡಿಪಿಎನ್: ನೇಸ:09:2019–20, ದಿನಾಂಕ: 08.10.2021ರನ್ವಯ ಅರ್ಹ ಅಭ್ಯರ್ಥಿಗಳ ಮಾಹಿತಿಗಾಗಿ ಈಗಾಗಲೆ ಪ್ರಕಟಿಸಲಾಗಿದೆ. ಸದರಿ ಅಧಿಸೂಚನೆಯ ಲಗತ್ತು ಪ್ರಕಟಿಸಲಾಗಿರುವ ಅರ್ಹ ಅಭ್ಯರ್ಥಿಗಳ ಮಾಹಿತಿಯನ್ನೊಳಗೊಂಡ ಪಟ್ಟಿಯ ಕೊನೆಯ ಅಂಕಣ (selected category) ಎಂಬ ಶೀರ್ಷಿಕೆಯಡಿಯಲ್ಲಿ ಮುಖ್ಯ ಪರೀಕ್ಷೆಗೆ ಅರ್ಹರಾಗಿರುವ ಪ್ರವರ್ಗವಾರು ಅಭ್ಯರ್ಥಿಗಳ ವಿವರಗಳನ್ನು ಸದರಿ ಪಟ್ಟಿಯು ಒಳಗೊಂಡಿರುತ್ತದೆ.

ಮುಂದುವರೆದು ದಿನಾಂಕ: 08.10.2021ರ ಅಧಿಸೂಚನೆಯಲ್ಲಿ ಪ್ರವರ್ಗವಾರು ಮುಖ್ಯ ಪರೀಕ್ಷೆಗೆ ಅರ್ಹರಾಗಿರುವ ಅಭ್ಯರ್ಥಿಗಳ ಪ್ರತ್ಯೇಕ ಪಟ್ಟಿ ಬಗ್ಗೆ ಕೆಲವು ಅಭ್ಯರ್ಥಿಗಳು ಸಮಿತಿಯನ್ನು ಮೌಖಿಕವಾಗಿ ಮತ್ತು ದೂರವಾಣಿ ಮುಖೇನ ಸಂಪರ್ಕಿಸಿದ ಕಾರಣ ಮುಖ್ಯ ಪರೀಕ್ಷೆಗೆ ಪ್ರವರ್ಗವಾರು ಅರ್ಹರಾಗಿರುವ ಅಭ್ಯರ್ಥಿಗಳಲ್ಲಿ ಈ ಬಗ್ಗೆ ಇರಬಹುದಾದ ಗೊಂದಲವನ್ನು ನಿವಾರಿಸುವ ಸದುದ್ದೇಶದಿಂದ ಮತ್ತೊಮ್ಮೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವನ್ನು ಸಂಪರ್ಕಿಸಿ, ಮುಖ್ಯ ಪರೀಕ್ಷೆಗೆ ಪ್ರವರ್ಗವಾರು 1:10ರ ಅನುಪಾತದಲ್ಲಿ ಅರ್ಹರಿರುವ ಅಭ್ಯರ್ಥಿಗಳ ಪಟ್ಟಿಯ ಬಗ್ಗೆ ಸ್ಪಷ್ಟೀಕರಣ ಪಡೆದು, ಸದರಿ ಪಟ್ಟಿಗೆ ದಿನಾಂಕ: 22.10.2021 ರಂದು ನಡೆದ ನೇಮಕಾತಿ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದು, ಮುಖ್ಯ ಪರೀಕ್ಷೆಗೆ ಪ್ರವರ್ಗವಾರು ಅರ್ಹರಾಗಿರುವ 1573 ಅಭ್ಯರ್ಥಿಗಳ ಪಟ್ಟಿಯನ್ನು ಈ ಮೂಲಕ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.

26/10/2021

**( ಹೆಚ್.ಕೆ. ಜಗದೀಶ್ )**
ನಿರ್ದೇಶಕರು(ಪ್ರ)
ಹಾಗೂ ನೇಮಕಾತಿ ಸಮಿತಿ ಸದಸ್ಯ ಕಾರ್ಯದರ್ಶಿಗಳು,
ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ
ಇಲಾಖೆ, ಬೆಂಗಳೂರು

**ಪ್ರತಿಯನ್ನು: ಇ-ಮೇಲ್ ಮುಖಾಂತರ ಸಲ್ಲಿಸಲಾಗಿದೆ/ಕಳುಹಿಸಲಾಗಿದೆ.**

1. ರಾಜ್ಯದ ಎಲ್ಲಾ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಮಾಹಿತಿಗಾಗಿ ಹಾಗೂ ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲ ಕಛೇರಿಗಳಲ್ಲಿ ಪ್ರಕಟಿಸುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಗೌರವಪೂರ್ವಕವಾಗಿ ಕೋರಲಾಗಿದೆ.
2. ಕರ್ನಾಟಕ ರಾಜ್ಯ ವಕೀಲರ ಪರಿಷತ್ತು, ಬೆಂಗಳೂರು, ಅವರ ಮಾಹಿತಿಗಾಗಿ ಹಾಗೂ ರಾಜ್ಯದ ಎಲ್ಲ ವಕೀಲರ ಸಂಘಗಳಲ್ಲಿ ಪ್ರಕಟಿಸುವ ಬಗ್ಗೆ ಕ್ರಮ ಕೈಗೊಳ್ಳುವಂತೆ ವಿನಂತಿಸಲಾಗಿದೆ.
3. ರಾಜ್ಯದ ಎಲ್ಲಾ ಕಾನೂನು ಅಧಿಕಾರಿಗಳು(ಹಿರಿಯ), ಅವರ ಮಾಹಿತಿಗಾಗಿ ಹಾಗೂ ತಮ್ಮ ಕಛೇರಿಯನ್ನು ಒಳಗೊಂಡಂತೆ ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಭಿಯೋಜಕರ ಕಛೇರಿಯ ಸೂಚನಾ ಫಲಕಗಳಲ್ಲಿ ತಕ್ಷಣ ಪ್ರಕಟಿಸುವ ಬಗ್ಗೆ ಕ್ರಮ ವಹಿಸಲು ತಿಳಿಸಲಾಗಿದೆ.
4. ಕಛೇರಿ ಸೂಚನಾ ಫಲಕಕ್ಕೆ